# ರಾಗಿ – ಖುಷ್ಕಿ

## (ದಕ್ಷಿಣ ಒಣ ಪ್ರದೇಶ, ಮಲೆನಾಡು ಮತ್ತು ಅರೆ ಮಲೆನಾಡು)



**ದಕ್ಷಿಣ ಜಿಲ್ಲೆಗಳಲ್ಲಿ ರಾಗಿಯು ಒಂದು ಮುಖ್ಯವಾದ ಖುಷ್ಕಿ ಬೆಳೆ.**

**ತಳಿಗಳು ಮತ್ತು ಕಾಲ**

| ತಳಿಗಳು | ಅವಧಿ (ದಿನಗಳಲ್ಲಿ) | ಬಿತ್ತನೆ ಕಾಲ |
|---|---|---|
| 1. ಇಂಡಾಫ್–8 | 120–130 | ಜೂನ್–ಜುಲೈ |
| 2. ಎಂ.ಆರ್–1 | 120–125 | |
| 3. ಇಂಡಾಫ–5 | 105–110 | ಜುಲೈ–ಆಗಸ್ಟ್ |
| 4. ಪಿ.ಆರ್–202 | 115–120 | ಆಗಸ್ಟ್ |
| 5. ಇಂಡಾಫ್–9 | 105–115 | ಆಗಸ್ಟ್–ಅಕ್ಟೋಬರ್ |
| 6. ಹೆಚ್.ಆರ್–911 | 115–120 | ಜುಲೈ |
| 7. ಜಿ.ಪಿ.ಯು–28 | 110–115 | ಜುಲೈ–ಆಗಸ್ಟ್ |
| 8. ಎಂ.ಆರ್–2 | 125–130 | ಜೂನ್–ಜುಲೈ (ವಲಯ–7) |
| 9. ಎಲ್–5 | 115–120 | ಜೂನ್–ಜುಲೈ |

*ಇಲುಕು ಹಾಗೂ ಕುತ್ತಿಗೆ ಬೆಂಕಿ ರೋಗ ತಡೆದುಕೊಳ್ಳುವ ಶಕ್ತಿಯಿರುತ್ತದೆ (ಸೂಕ್ತವಾದ ವಲಯಗಳು 4, 5, 6 ಮತ್ತು 7)

## ಬೇಸಾಯಕ್ಕೆ ಬೇಕಾಗುವ ಸಾಮಗ್ರಿಗಳು (ಹೆಕ್ಟೇರ್‌ಗೆ)

| | | |
|---|---|---|
| ಬೀಜ: | | |
| ಕೂರಿಗೆ ಬಿತ್ತನೆಗೆ | | 10–12 ಕೆ.ಜಿ |
| ನಾಟಿ ಬೆಳೆಗೆ | | 5 ಕೆ.ಜಿ |
| ಕೊಟ್ಟಿಗೆ ಗೊಬ್ಬರ ಅಥವಾ ಕಾಂಪೋಸ್ಟ್ | | 7.5 ಟನ್ |
| ರಾಸಾಯನಿಕ ಗೊಬ್ಬರಗಳು: | | |
| | ಸಾರಜನಕ | 50 ಕೆ.ಜಿ |
| | ರಂಜಕ | 40 ಕೆ.ಜಿ |
| | ಪೊಟ್ಯಾಷ್ | 25 ಕೆ.ಜಿ |

ಸೂಚನೆ: ಮಣ್ಣಿನ ಪರೀಕ್ಷೆಯ ಫಲಿತಾಂಶದ ಆಧಾರದ ಮೇಲೆ ರಾಸಾಯನಿಕ ಗೊಬ್ಬರಗಳ ಪ್ರಮಾಣವನ್ನು ನಿರ್ಧರಿಸಿ.

ಬಿತ್ತನೆ ಬೀಜ ಹದ ಮಾಡುವುದು: ಪ್ರತಿ ಕೆ.ಜಿ.ಬಿತ್ತನೆ ರಾಗಿಯನ್ನು 600 ಮಿ.ಲೀ ನೀರಿನಲ್ಲಿ 18 ಗಂಟೆಗಳ ಕಾಲ ನೆನೆಸಿ (ಸಾಯಂಕಾಲದಿಂದ ಮಾರನೆಯ ದಿನ ಬೆಳಗಿನ ವರೆಗೆ ನೆನೆಸುವುದರಿಮದ ಮೊದಲ ಮೊಳಕೆಯ ಲಕ್ಷಣಗಳನ್ನು ಕಾಣಬಹುದು). ಆನಂತರ ಬಿತ್ತನೆಯನ್ನು 24 ಗಂಟೆಗಳ ಕಾಲ ನೆರಳಿನಲ್ಲಿ ಒಣಗಿಸಿ, 12.5 ಗ್ರಾಂ ಸತುವಿನ ಸೆಲ್ಫೇಟನ್ನು 5–6 ಚಮಚ ನೀರಿನಲ್ಲಿ ಬೆರೆಸಿ ತಯಾರಿಸಿದ ದ್ರಾವಣವನ್ನು ಒಂದು ಮಡಿಕೆ ಅಥವಾ ಪ್ಲಾಸ್ಟಿಕ್ ಪಾತ್ರೆಯಲ್ಲಿ ಹಾಕಿ. ಇದಕ್ಕೆ 2 ರಿಮದ 2.5 ಕೆ.ಜಿ ಬೀಜವನ್ನು ಬೆರೆಸಿ ಒಂದು ರಾತ್ರಿ ಇಡಿ. ನಂತರ ಶಿಲೀಂಧ್ರನಾಶಕದಿಂದ ಬೀಜೋಪಚಾರ ಮಾಡಿ.

## ಬಿತ್ತನೆ





ಬೀಜವನ್ನು 30 ಸೆ.ಮೀ ಅಂತರದ ಸಂಯುಕ್ತ ಕೂರಿಗೆಯಿಂದ ನಾಟಿ ಮಾಡುವುದಾದಲ್ಲಿ 30 ಸೆಂ.ಮೀ ಸಾಲುಗಳಲ್ಲಿ 10 ಸೆಂ.ಮೀ ಅಂತರದಲ್ಲಿ 2–3 ಪೈರಿನಂತೆ ನಾಟಿ ಮಾಡಿ. ಬಿತ್ತನೆ ಅಥವಾ ನಾಟಿ ಮಾಡುವ ಮೊದಲು ಅರ್ಧಭಾಗ ಸಾರಜನಕ ಮತ್ತು ಪೂರ್ತಿ ರಂಜಕ ಮತ್ತು ಪೊಟ್ಯಾಷ್ ರಾಸಾಯನಿಕ ಗೊಬ್ಬರಗಳನ್ನು ಕೊಡಿ 6 ರಿಂದ 7 ವಾರಗಳ ನಮತರ ಉಳಿದ ಅರ್ಧಭಾಗ ಸಾರಜನಕ ಒದಗಿಸುವ ರಾಸಾಯನಿಕ ಗೊಬ್ಬರವನ್ನು ಮೇಲುಗೊಬ್ಬರವಾಗಿ ಕೊಡಿ.

ಅನಿವಾರ್ಯಕರಣಗಳಿಂದ ಮೂಲ ಗೊಬ್ಬರ ಕೊಡಲಾಗದೆ ಇದ್ದು ಒಂದು ತಿಂಗಳ ನಮತರ ರಸಗೊಬ್ಬರವನ್ನು ಕೊಡುವುದಾದರೆ ಶಿಫಾರಸ್ಸು ಮಾಡಿದ ಅರ್ಧ ಭಾಗ ಅಂದರೆ 25 ಕೆ.ಜಿ ಸಾರಜನಕ, 18 ಕೆ.ಜಿ ರಂಜಕ ಮತ್ತು 12 ಕೆ.ಜಿ ಪೊಟ್ಯಾಷ್ ಕೊಟ್ಟರೆ ಸಾಕು.

ಉಳಿದ ಸಾಗುವಳಿ ಕ್ರಮಗಳನ್ನು ನೀರಾವರಿ ಬೆಳೆಗೆ ಸೂಚಿಸಿದಂತೆಯೇ ಅನುಸರಿಸಿ, ಅಗತ್ಯವಿದ್ದಾಗ ಮಾತ್ರ ಸಸ್ಯ ಸಂರಕ್ಷಣಾ ಕ್ರಮಗಳನ್ನು ತೆಗೆದುಕೊಳ್ಳಿ.

## ಕಳೆ ನಿಯಂತ್ರಣ

ಬಿತ್ತಿದ ದಿವಸ ಅಥವಾ ಮಾರನೆಯ ದಿವಸ ಹೆಕ್ಟೇರಿಗೆ 750 ಗ್ರಾಂ ಯಸೋಪ್ರೋಟುರಾನ್ ಶೇ.75ರ ಪುಡಿಯನ್ನು 750 ಲೀ ನೀರಿನಲ್ಲಿ ಬೆರೆಸಿ ಸಿಂಪರಣೆ ಮಾಡಿ, ಸಿಂಪರಣೆಯ ಸಮಯದಲ್ಲಿ ಮಣ್ಣಿನಲ್ಲಿ ಸಾಕಷ್ಟು ತೇವಾಂಶವಿರಲಿ ಮತ್ತು ಹೆಚ್ಚು ಹೆಂಟೆಗಳಿರದಂತೆ ಎಚ್ಚರವಹಿಸಿ. ಸಿಂಪರಣೆಯ ನಂತರ ಭೂಮಿಯನ್ನು ತುಳಿಯಬೇಕು. ಬೀಜದಿಂದ ಪ್ರಸಾರವಾಗುವ ಕಳೆಗಳೆಲ್ಲವನ್ನು ಹಟೋಟಿ ಮಾಡಬಹುದು.

ಇಳುವರಿ

ಹೆಕ್ಟೇರ್‌ಗೆ ಸುಮಾರು 15–20 ಕ್ವಿಂಟಾಲ್ ಧಾನ್ಯ ಹಾಗೂ 3–4 ಟನ್ ಹುಲ್ಲು ಪಡೆಯಬಹುದು.

ಮುಖ್ಯವಾದ, ಖರ್ಚು ಇಲ್ಲದ ಬೇಸಾಯ ಕ್ರಮಗಳು

- ಬಿತ್ತನೆಗೆ 3 ವಾರಗಳ ಮೊದಲೇ ಕೊಟ್ಟಿಗೆ ಗೊಬ್ಬರ ಅಥವಾ ಕಾಂಪೋಸ್ಟ್ ಗೊಬ್ಬರ ಮಣ್ಣಿನಲ್ಲಿ ಬೆರೆಸಿ.
- ಕಾಂಪೋಸ್ಟ್/ಕೊಟ್ಟಿಗೆ ಗೊಬ್ಬರವನ್ನು ಮಣ್ಣಿಗೆ ಬೆರೆಸಲು ತಡವಾದಲ್ಲಿ ಅದರ ಗುಪ್ಪೆಗಳನ್ನು ಮಣ್ಣಿನ ಪದರದಿಂದ ಮುಚ್ಚಿಡುವುದು ಲಾಭದಾಯ.
- ಬಿತ್ತನೆಯ ಕಾಲಕ್ಕನುಸಾರವಾಗಿ ತಳಿಗಳ ಆಯ್ಕೆ ಮಾಡಿ.
- 20–25 ದಿಸವಗಳ ಪೈರನ್ನು ನಾಟಿ ಮಾಡಿ.
- ಶುಷ್ಕ ವಾತಾವರಣದಲ್ಲಿ ಹೆಚ್ಚು ಅಂತರ ಬೇಸಾಯ ಪ್ರಯೋಜನಕಾರಿ.